# ವಸುಧೃಕ ಬಾಂಧವ ರೇಚಣದಂಡನಾಥ

ಹತ್ತನೆಯ ಶತಮಾನದಲ್ಲಿ , ಕರ್ನಾಟಕದ ಸಾಂಸ್ಕೃತಿಕ ರಂಗದಲ್ಲಿ, ಉಜ್ವಲವಾಗಿ ಬೆಳಗಿದ ಬಹುಮುಖ ಪ್ರತಿಭೆಯ ದಾನಚಿಂತಾಮಣಿ ಅತ್ತಿಮಬ್ಬೆಯನ್ನು ಕುರಿತು, ಒಂದು ಸಾವಿರ ವರ್ಷದ ಚರಿತ್ರೆ ಯುದ್ದಕ್ಕೂ ಮಾಹಿತಿಳು ಉಪಲಬ್ಡ ವಾಗಿವೆ . ಕರ್ನಾಟಕವನ್ನು ಆಳಿದ ಕಲ್ಯಾಣಿ ಚಾಳುಕ್ಯ ಸಾಮ್ರಾಜ್ಯಕ್ಕಾಗಿ ಒಂದು ಇಡೀ ಕುಟುಂಬ ಬಲ್ಲಿದಾನವಾಯಿತು: ಅದೇ ಅತ್ತಿಮಬ್ಬೆಯ ಮನೆತನ. ಆಕೆಯ ತಂದೆ ಮಲ್ಲಪಯ್ಯ, ಚಿಕ್ಕಪ್ಪ ಪುನ್ನಮಯ್ಯ, ಸೋದರರಾದ ಗುಂಡಮಯ್ಯ ಎಳಮಯ್ಯ ಪೊನ್ನಮಯ್ಯ ಆಹವಮಲ್ಲ ವಲ್ಲ ಎಂಬ ಐವರು, ಮಾವನಾದ ದಲ್ಲಪಯ್ಯ , ಗಂಡನಾದ ನಾಗೆದೇವ. ಮಗನಾದ ಅಣ್ಣಿಗದೇವ–ಇವರೆಲರೂ ಚಾಳುಕ್ಯ ಸೈನ್ಯದ ಚಮೂಪತಿಗಳಾಗಿ ಹೋರಾಡಿದರು.

ಅತ್ತಿಮಬ್ಬೆಯ ಚಿಕ್ಕಪ್ಪ ಪುನ್ನಮಯ್ಯು ಕಾವೇರಿ ನದಿಯ ತೀರದಲ್ಲಿ ಶತ್ರು ಗಳ್ಳಿಂದ ಹತನಾದನು , ಮಣ್ಮಳಿಗೊಂಡನು. ಅತ್ತಿಮಬ್ಬೇಯ ಗಂಡನಾದ ನಾಗದೇವನೂ ಹಗೆಗಳ ಕೊಲೆಯ ಈಡಾಗಿ ರಣರಂಗದಲೇ ಮುಮ್ಮಳಿಹೊಂಡನು.ಇಷ್ಟಾಗಿಯೂ ಅವರ ಸಂಸಾರ ರಾಷ್ಟ್ರ ಪ್ರೇಮವನ್ನು ಜೀವಂತವಾಗಿ ಇರಿಸಿತ್ತು. ದೇಶಕ್ಕಾಗಿ ಗೋರಾಡುವ ರಾಷ್ಟಕಾಯಕ ಆ ಕುಟುಂಬದ ನೋಂಪಿಯಗಿತ್ತು .ಸ್ವಯಂ ಅತ್ತಿಮಬ್ಬೆಯೇ ರಣದಲ್ಲಿ ಎದುರಾದ ಉದ್ವತ್ತ ಶತ್ರುವನ್ನು ಸೈನ್ಯದೊಂದಿಗೆ ತಡೆದು ತನ್ನ ತಾಯ್ನಾಡಿನ ಗೌರವವನ್ನು ಕಾಪಾಡಿದಳು .ಹೀಗೆ ಯುದ್ದಭೂಮಿಯಲ್ಲಿ ಶತ್ರು ಸೈನ್ಯವನ್ನಟದುರುಸಿ ಗೆದ್ದ ಪ್ರಥಮ ಮಹಿಳೆ ಅತ್ತಿಮಬ್ಬೆ ಎಂಬುದು ಕನ್ನಡಿಗರು ಹೆಮ್ಮೆ ಪಡುವಂಥ ವಿಚಾರ. ಅದರೊಂದಿಗೇನೆ ಅತ್ತಿಮಬ್ಬೆಯ ಕನ್ನಡ ಭಾಷ ಸಾಹಿತ್ಯವನೂ ಪೋಷಿಸಿ, ಮಾತೃಭಿಕ್ಷಯನ್ನು ರಕ್ಷಿಸಿದ ರಕ್ಷಾಮಣಿಯೂ ಆಥಿದ್ದಾಳೆ.

ಅತ್ತಿಮಬ್ಬೆಯತರುವಾಯ ಅವರ ವಂಶದವರ ಯಾರು ಬಂದರು,ಏನಾದರು ಎಂಬ ಪ್ರಶೆಹಲಿಗೆ ಅವಕಾಶವಿದೆ: ಆದಿಕ್ಕಿನಲ್ಲಿ ಉತ್ತರಿಸುವ ಪ್ರಯತದ ಫಲ ಈ ಸಂಪ್ರಬಂಧ.

ಅತ್ತಿಮಬ್ಬೆಯ ತೌರುಮನೆ ಮತ್ತು ಮಾವನ ಮನೆಯವರ ವಿವರಗಳು ವಿಪುಲವಾಗಿ ದೊರೆತಿವೆ. ಆಕೆಯದು ಕೌಂಡಿನ್ಯ ಗೋತ್ರದ ವಾಜಿವಂಶ ಈವಾಜಿ ವಂಶದಲ್ಲಿ ಹಲವು ಮಹಾಪುರುಷರು ಆಗಿಹೋಗಿದಾರೆ. ವಾಜಿಕುಲದ ಜೈನ ಶಾಖೆಯವರಲ್ಲಿ ದಲ್ಲಪಯ್ಯ, ಅವನ ಮಗ ನಾಗದೇವ (ಅತ್ತಿಮಬ್ಬೆಯ ಗಂಡ) ಅವನ ಮಗನಾದ ಅಣ್ಣಿಗದೇವ (ಅತ್ತಿಮಬ್ಬೆಯ ಮಗ) ಮೊದಲಾದವರು ಪ್ರಸಿದ್ದರಿದ್ದಾರೆ. ಅತ್ತಿಮಬ್ಬೆಯ ನಾಗದೇವ ದಂಪತಿಗಳ ಹಿರಿಯ ಮಗ ಅಣ್ಣಿಗದೇವ. ಈತನ ವೈವಾಹಿಕ ವಿವರಗಳಿ ಇರುವ ರನ್ನನ ಅಜಿತಪುರಾಣ ಮತ್ತು ಲಕ್ಕುಂಡಿಯ ಶಾಸನಗಳನ್ನು ಸೂಕ್ಷ್ಮ ವಾಗಿ ಪರಿಶೀಲಿಸಿದರೆ, ಅಣ್ಣಿದೇವನು ಅಪುತ್ರ ಕ ಆಥಿದ್ದಂತೆ ತೋರುತ್ತದೆ.

ನಾಗದೇವನು ಕಿರಿಯ ಮಕ್ಕಳ ವಿಚಾರವಾಗಿ ಕಾವ್ಯ ಮತ್ತು ಶಾಸನಗಳು ವಹಿಸಿರುವ ಮೌನವನ್ನು ಸೋಟಿಸಲು ಸಾಧ್ಯವಾಗಿಲ್ಲ. ಹಾಗೆಯೇ ನಾಗದೇವ ತಮ್ಮಂದಿರ ವಿಚಾರಗಳೂ ದಾಖಲಾದಂತಿಲ್ಲ. ಲಕ್ಕುಂಡಿಯ ಶಾಸನದಲ್ಲಿ ನಾಗದೇವನನ್ನು ದಲ್ಲಪನ ಹಿರಿಯ ಮಗನೆಂದು ಸ್ಪಷ್ಟವಾಗಿ ಹೇಳಿದೆ. ಅಂದಮೇಲೆ ಕಿರಿಯ ಮಕ್ಕಳು ಇರಲೇಭೆಕು. ದಲ್ಲಪ ,ನಾಗದೇವ, ಅಣ್ಣಿಗದೇವ ಲ್ಕ್ಕುಂಡಿಯ ಮೂಲ ನಿವಾಸಿಗಳು. ಅಣ್ಣಿಗದೇವನಂತೂ ಲಕ್ಕುಂಡಿಯಲೇ ನೆಲಸಿದ್ದು, ಲಕ್ಕು ಂಡಿಯನ್ನುಒಲಗೊಂಡ ಮಾಸವಾಡಿ–೧೪೦ ಕಂಪಣ ಪ್ರ ದೇಶಕ್ಕೆ ಇಡೆಯನಾಗಿ ಬೀಳುವೃತ್ತಿಯಿಂದ ಆಳುತ್ತಿದ್ದ ನು{ಸೌ. ಇ.ಇ. ೧೧–೧, ೫೨. ೧೦೦೭: ಬಾ. ಕ. ಇ. ೨೮, ೧೯೨೬–೨೭]

ಅತ್ತಿಮಬ್ಬೆ ರನ್ನಕವಿಗೆ ಆಶ್ರಯನೀಡಿ ಅಜಿತ ಪುರಾಣ ಕಾವ್ಯವನ್ನು ಬರೆಸಿದ್ದೂ , ೧೫೦೧ ನೆಯ ಮತ್ತು ಕಟ್ಟಕಡೆಯ ಬಸದಿಯನ್ನಿ ಕಟ್ಟಿಸಿದ್ದೂ ಲಕ್ಕುಂಡಿಯಲ್ಲಿಯೇ. ಅತ್ತಿಮಬ್ಬೆಯ ಸಮಾಧಿ ವಿಧಿಯಿಂದಲಕ್ಕುಂಡಿಯಲ್ಲಿಯೇ ಮುಡಿಪಿರಬಹುದು. ಮತ್ತು ಕ್ರಿ.ಶ.೧೧೧೮–೨೦ರ

ಸುಮಾರಿನಲ್ಲಿ ಅತ್ತಿಮಬ್ಬೆ ಮುಡಿಸಿದ ಒಂದೆರಡು  ವರ್ಷಗಳಲ್ಲಿ, ಫ್ರಾಯ: ೧೦೨೨ ರವೇಳೆಗೆ ಅಣ್ಣಗದೇವನೂ ಮುಂಡಿಪಿದಂತೆ ತೋರುತ್ತದೆ. ಏಕೆಂದರೆ ಚಾಳುಕ್ಯ ಜಗದೇಕಮಲ್ಲ ಇಮ್ಮಡಿ ಜಯಸಿಂಹನ ಮಹಾಸಾಮಂತನಾದ ದಸರಸನು ಕ್ರಿ.ಶ. ೧೦೨೨ ರಿಂದ ಮಾಸವಾಡಿ ಯನ್ನು ಆಳುತ್ತಿದ್ದುದಕ್ಕೆ ಶಾಸನಗಳ ಆಧಾರವಿದೆ. [ಸೌ,ಇ.ಇ. ೧೧-೧.೫೮. ೧೦೨೨. ನಾಗರ್‌ಹಳ್ಳಿ (ಧಾಜಿ./ಮುಂಡರಗಿತಾ)].

ಅಣ್ಣಗದೇವನ ತರುವಾಯ ಆತನ ಚಿಕ್ಕಪ್ಪ ಮತ್ತು ಆತನ ತಮ್ಮಂದಿರ ಪರಂಪರೆ ಮುಂದುವರಿಯಿತು. ಆ ಪರೆಂಪರೆಯಲ್ಲಿ ಬದಷು ಹುಳುಮಯ್ಯ್ ಮತ್ತು ರೇಚಣ ದಂಡಾದಿಶರು ಚಾಳುಕ್ಯರ ಆಸರೆಯಲ್ಲಿಯೇ ಭೆಳೆದುಬಂದ ಈ ಕುಟುಂಬಗಳು ಲಕ್ಕುಂಡಿಯನ್ನು ಬಿಟ್ಟು ಚಾಳುಕರನ್ನು ್ಯ ತೊರೆದು, ದೂರದ ಊರುಗಳಿಗೆ ಭೇರೆ ಕಡೆಗೆ ಹೋಗಭೇಕಾದ ಅನಿವಾರ್ಯ ಬರಲು ಚರಿತ್ರೆಯಲ್ಲಿ ಸಂಭವಿಸಿದ ಘಟನಾವಳಿಯೇ ಕಾರಣ. ಆರನೆಯ ವಿಕ್ರಮಾದಿತ್ಯ ಚಕ್ರವರ್ತಿಯ ತರುವಾಯ ಬಂದ ಚಾಳುಕ್ಯ ಮಹಾರಾಜರು ಜೈನಪರವಾದ ಧೋರಣೆಯಿಂದ ಸರಿದು ಶೈವಪರವಾದ ನಿಲುಮೆಗೆ ಒಲವು ತೊರಿದರು. ಇದರ ಸೂಕ್ಷ್ಮ ಪರಿಣಾಮಗಳನ್ನು ಗ್ರಹಿಸಿದ ಯಕ್ಷರಾಜನು ಲುಕ್ಕುಂಡಿಗೆ ವಿದಾಯ ಹೇಳಿದ ಮೊದಲಿಗನು[ಎ. ಕ.೨, ೭(೯೬೪).೧೧೬೩. ಪು. ೩೦: ಅದೇ ,೪೭೬.(೩೪೫) ವಾಜಿ ವಂಶದ ಯಕ್ಷರಾಜನು ಫ್ರಾಯ: ದಲ್ಲಪನ ಕಿರಿಯ ಮಗನ,ಅದಂರೆ ನಾಗದೇವನ ತಮ್ಮನ ಸಂತಾನಕ್ಕೆ ಸೇರಿದವನು. ಯಕ್ಷರಾಜನು ವಿಕ್ಷಮಾದಿತ್ಯನ ಆಳ್ವಿಕೆಯ ಅಂತ್ಯದ ಅವಧಿಯಲ್ಲಿ ಲ್ಕುಕ್ಕಂಡಿಯನ್ನು ಬಿಟ್ಟು ಹೊಯ್ಸಳರನೂ ದ್ವಾರಸಮುದ್ರವನೂ ಸೇರಿದನು.ಅವನ ಮಗನೇಹುಳ್ಳಭಂಡಾರಿ [ಎ.ಕ. ೭(೧೯೭೯) ೬೩(ಳನಾಮ ೩೦) ೧೧೬೫.ಲಾಲನಕೆರೆ (ಮಂಡ್ಯ೩-ಜಿ/ನಾಮಂ. ತಾ) ಪು. ೪೩. ರಾಲು:೩೦-೩೧]

ಯಕ್ಷರಾಜನೂ ಅವನ ಕುಟುಂಬವೂ ಲಕ್ಕುಂಡಿಯನ್ನು ತೊರೆದ ಮೇಲೂ, ಆತನ ದಾಯಾದಿ ಕುಟುಂಬದಷಾದ ಅಣ್ಣಗದೇವನ ತಮ್ಮನ ಮನೆಯವರು ಲಕ್ಕುಂಡಿಯನ್ನು ತೊರೆದ ಮೇಲೂ, ಆತನ

ದಾಯಾದು ಕುಟುಂಬದರಾದ ಅಣ್ಣಗದೇವನ ತಮ್ಮನ ಮನೆಯವರು ಲ್ಕ್ಕುಂಡಿಯನ್ನು ಬಿಡಲಿಲ್ಲ. ಆ ಮನೆಯ ಮಗನಾದನು ರೇಚಣ ದಂಡಾಧಿಪತಿ. ಅಣ್ಣಗದೇವನುಆದಮೇಲೂ ವಾಜಿವಂಶ್ಯದ ಬೇರುಗಳು ಲಕ್ಕುಂಡಿಯಲ್ಲಿದ್ದುವು. ತನ್ನ ಕುಲದವರ ಜಿನಧರ್ಮನಿಷಯನ್ನು ಯಶ ಸ್ವಿಯಾಗಿ ಮುಂದುವರಿಸಿದವನು 'ವಸುಧೃವ ಬಾಂಧವನಾದ ರೇಚಣನು. ಈತನು ಲಕ್ಕುಂಡಿಯಲ್ಲಿ 'ವಸುಧೃಕ ಬಾನ್ಧವ ಜಿನಾಲಯ'ವನ್ನು ಸುಮಾರು ಕ್ರಿ. ಶ. ೧೧೭೫ ರಲ್ಲಿ ಕಟ್ಟಿಸಿದನು. ಆವಸುಧೈಕ ಬಾನ್ಧವ ಜಿನಾಲಯದಲ್ಲಿ ತ್ರಿಭುವನ ತಿಲಕ ಶಾನಿನಾಥ ತೀರ್ಥಂಕರ ಸ್ವಾಮಿಯ ಬಿಂಬವು ಮೂಲನಾಯಕ ಪ್ರತಿಮೆಯಾಗಿತ್ತೆಂದು ಶಾಸನದಂದಿ ತಿಳಿದುಬರುತ್ತದೆ. ರೇಚಣನ ವಿಚಾರವಾಗಿ ಕೆಲವು ಮಾಹಿತುಗಳು ಶಾಸನೋಕವಾಗಿವೆ. [ಎ.ಕ. .೭-೧, ೧೯೭, ೧೧೮೦. ಚಿಕ್ಕಮಾಗಡಿ (ಶಿವಮೊಗ್ಗಜಿಲ್ಲೆ/ ಶಿಕಾರಿ ಪುರ ತಾ)ಪು. ೨೮೫-೯೧]

ಶ್ರೀವಚಂ ಸಿರಿಯಿಂ ಸಮೃದ್ಧನೆಸೆವಾ ನಾಗಾಂಬಿಕಾಸೂನು ಬೋ
ಗಾವಾಸಂ ವಸುಧೈಕ ಬಾನ್ಧವನುದಾರಂ ಸುತ್ಯಗೌರೀ ಸುಖ
ಶ್ರೀ ವಿಷ್ಟಂ ವೃಶಭಧ್ವಜ ಪ್ರಿಯತಮಂ ನಾರಾಯಣಾತೋದ್ಭವಂ
ಭಾವಂ ಭೆತ್ತಿರೆ ಚೆಲ್ವನೆಂದೆನಿಸಿದಂ ಶ್ರೀರೇಚಿದಣ್ಣಾಡಿಪಂ ॥ [ಸಾಲು೩೬-೩೮]

ನಡೆದನೆಲಂ ರಣೋರ್ವ್ವರೆಯೊಳಂತನಿತುಂ ತನಗಪಜ್ಜರಿಂ
ಪಡೆದ ನೆಲಂ ದಲೆಂಬಿನಸಿಗನ್ಯ ನೃಪಾಳರನಿಕ್ಕುದುಂತೆ ಕಿ
ಟ್ಟಿಡೆ ಕಡದೋಸವೆಂಬನ ಸಹಂ ಮಿಗೆ ದೇಗುಡೆ ಪತ್ತೆ ತಾನೆಬೆಂ
ಗುಡುವ ವೊಲೆಂಬನೇನದಟನೋ ಕಲಿ ರೇಚಣ ದಣ್ಣಾ್ಯಕಂ॥
ಸಾಲು೩೨-೩೩]

ರೇಚಣನು ನಾಗಾಂಬಿಕೆಯ ಮಗ, ತಂದೆಯ ಹೆಸರು ನಾರಾಯಣ, ಮಡದಿಯ ಹೆಸರುಗೌರಿ.ಹಗಗಳನ್ನು ಲೆಕ್ಕಿದೆ ಹೋರಾಡುವ ಯುದ್ದೋತ್ಸಾಹ ಮತ್ತು ಯುದ್ದ ಕಲೆಯನ್ನು ತ್ನನ ಅಜ್ಜ ಪಜ್ಜರ ಪರೆಂಪರೆಯಿಂದ ಪಡೆದಿದ್ದನು. ಅದರಿಂದ ರೇಚಣನು ತನ್ನತಾತ ಮನೆಯನ್ನು ಬಿಟ್ಟು ಹೋಗದ ವಾಜಿ ವಂಶದ ವಾಂಛೆಯಿಂದ ಲಕ್ಕುಂಡಿಯಲ್ಲಿ ನೆಲಸಿದ್ದನು. ಆದೆರೆ ಮಾರ್ಪಾಟಾಗುತ್ತಿರುವ ರಾಜಕೀಯ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡನು. ರೇಚಣ ವಾಜಿ ವಂಶೋದ್ಭವನೆಂಬುದು ಶಾಸನ ಬದ್ದವಾಗಿದೆ: [ಎ.ಕ. ೫, ಅರಸೀಕೆರೆ ೬೯.೧೧೭೪ ]

ಕುಲವಮಂ ಪೇಟೊಡೆ ವಾಜಿ ತಿಲಕಂ ಮಂತ್ರಿ ತ್ವದೊಳ
ಪಲರುಂ ಜೀಯೆನೆ ದೇವಮಂತ್ರಿಯೊಲವಂ ಸಲ್ಲೀಲೆಯಿಂ ತೀಱುವಂ
ಚಲದಿಂದಾಂತರನಿಕ್ಕಿಮೆಟ್ಟಿ ಪಡೆವಂ ಸತ್ಕೀರ್ತಿಯಂ ಧಾತ್ರಿಯೊಳ
ನಲವಿಂ ರೇಚಣ ಮಂತ್ರಿ ಯಾಗ್ರ್ಗಮಧಿಕಂ ಸಾಹಿತ್ಯ ವಿದ್ಯಾಧಂ॥

ತನ್ನ ವಾಜಿವಂಶ ಅಜ್ಜ ಮುತ್ತಜ್ಜರು ನೆತ್ತರು ಹರಿಸಿ ತಳಪಾಯವಾಗಿ ನಿಂತು ಕಟ್ಟಿದ ಚಾಳುಕ್ಯಸಾಮ್ರಾಜ್ಯವು ಸ್ವಧರ್ಮವಾದ ಜಿನಧರ್ಮಕ್ಕೆ ಮೊದಲಿನ ಅಕ್ಕರೆ. ಆದ್ಯತೆ, ಫ್ರಭು ಶಕ್ತಿಯನ್ನು ಧಾರೆಯೆರೆಯುತ್ತಿಲ್ಲವೆಂಬುದುನ್ನು ರೇಚಣನು ಸೂಕ್ಷವಾಗಿ ಗ್ರಹಿಸಿದನು.

ರೇಚಣನು ಯಕ್ಷರಾಜನಂತ ತೌರೂರಿನ ಸೀಮೆಯನ್ನು ತೊರೆಯಲಿಲ್ಲ. ಅದರ ಬದಲಿಗೆ ತನ್ನ ಹಿರಿಯರು ದಲ್ಲಪಾದಿಗಳು ಉಪಯೋಗಿಸಿದ ರಾಜಕೀಯ ಕೌಶಲವನ್ನು ಬತ್ತಳಿಕೆಯಿಂದ ಹೊರತೆಗೆದನು. ದಲ್ಲಪನು ತೈಲಪನಿಗೆ ಹುರುದುಂಬಿಸಿ ರಾಸ್ಷ್ಟಕೂಟರಿಗೆ ಫ್ರತಿಸ್ಪ್ರರ್ಧಿಯಾಗಿ ನಿಲ್ಲಿಸಿ ಗೆಲ್ಲಿಸಿದನು.ಹೊಯ್ಸಳ ಸಾಮ್ರಾಜ್ಯದ ಉದಯಕ್ಕೆ ಕಾರಣನಾದನು.ಅದೇ ತೆರನಾಗಿ ಈಗ ದಲ್ಲಪನ ಅನಂತರ ಆರನೆಯ ತಲೆಮಾರಿಗೆ ಸೇರಿದ ರೇಚಣನು ರಾಜಕೀಯ ದಾಳಗಳ ನ್ನು ಉರುಳ್ಳಿಸಿದನು. ಮ್ಮಹತ್ವಾಕಾಂಕ್ಷಿ ಯಾಗಿದ್ದ ಚಾಳುಕ್ಯ ಸಿಂಹಾಸನದ ಮೇಲೆ ಹದ್ದುಗಣು ಬೀರುತ್ತಿದ್ದ

ಬಿಜ್ಜಣನನ್ನು ಹುರಿದುಂಬಿಸಿದನು. ರೇಚಣ್ಣನ ಸಾಮರ್ಥ್ಯ ತ್ನ್ನ ಬೆಂಬಲಕ್ಕೆ ದಕ್ಕಿದೊಡನೆ ಬಿಜ್ಜಳನು ಕಾರೋನ್ಮುಖನಾಗಿ ರಾಜ ಗದ್ದುಗೆ ಹತ್ತಿ ಕುಳಿತನು: [ಎ. ಕ.೭-೧, ಶಿಕಾರಿಪುರ೯೭, ೧೧೮೦, ಚಿಕ್ಕಮಾಗಡಿ]

ಕ್ರಮದಿಂದಾ ಬಿಜ್ಜಲೋರ್ವ್ವಿಪತಿಗೆ ಪಡೆದು ಸಪ್ತಾಂಗ ಸಂಪತ್ತಿಯಂ ಮ
ತ್ತ್ತಮದಂ ತಚಕ್ರಿಯಿಂದತ್ತಲುಮೊದವಿದ ರಾಜಾವಳೀ ಲೀಲೆಗಂ ತಂ
ದುಮಿದೇ ಸಪ್ತಾಂಗಮಂ ಕಾಣಸಿದನೆನೆ ಜಗಂ ಮಂತ್ರದಿಂ ತಂತ್ರದಿಂ ವಿ
ಕ್ರಮದಿಂ ಶ್ರೀಯಿಂ ಸದಾಚಾರದಿನೊಸೆದಂ ರೇಚಿದಣ್ಡಾಧಿನಾಥಂ॥

ಕಳಚುರ್ಯ್ಯ ಕ್ಷಿತಿಪಾಳ ರಾಜ್ಯಲತೆ ಪರ್ವ್ವಲ್ವನ್ನ ದೋ:ಶಾಖೆಯಂ
ವಿಳಸನ್ನಂದರ ಸಾನುಗಂ ವಿಬುಧ ಸೇವ್ಯಂ ವಿಸಿತ ಚಾಯನ
ಸ್ಥ್ವಳಿತೌದಾರ್ಯ್ಯ ವಿಳಾಸಭಾಸಿ ಸುಮನ ಸ್ಸಂಪೂರ್ಣ್ಣನುದ್ಯಶ:
ಫಳದಿಂ ರೇಚಣ ದಣ್ಡ ನಾಥನೆಸೆದಂ ಲೋಕೈಕ ಕಳದ್ರುಮಂ ॥

ರೇಚಣನು (ರೇಚರಸ, ರೇಚವಿಭು, ರೇಚಿದಂಡನಾಥ ) ಕಳಚುರ್ಯ್ಯರ ಆಹವಮಲ್ಲನ (೧೧೮೦-೮೩) ಮಹಾಪ್ರಧಾನನೂ , ಬಾಹತ್ತರ ನಿಯೋಹಾಧಿಪತಿಯೂ, ದಂಡಾಧಿನಾಥನೂ ಆಗಿದ್ದನೆಂಬುದನ್ನು ಮಾತ್ರ ವಿದ್ವಾಂಸರು ಗಮನಿಸಿದ್ದಾರೆ. ಆದರೆ ರೇಚನು ಅದೂಕ್ಕೊ ಎರಡು ದಶಕಹಳಷ್ಟು ಮುಂಚಿನಿಂದಲೂ ಕಲಚುರಿ ಕುಲದ ಸಂವರ್ಧನೆಯಲ್ಲಿ ಪ್ರಮುಖ ಪಾತ್ರ ವಹಿಸಿದನು. ಇಮ್ಮಡಿ ಬಿಜ್ಜಳನಿಗೆ (೧೧೬೨-೬೭) ಸಪಾಂಗ (ಸ್ವಾಮ್ವಿ, ಅಮಾತ್ಯ, ಜನಪದ, ದುರ್ಗ, ಕೋಶ , ಸೈನ್ಯ, ಮಿತ್ರ ) ಸಂಪತ್ತಿಯನ್ನು (ಪರಾ) ಕ್ರಮದಿಂದ ಪಡೆದುಕೂಟ್ಟವನೇ ರೇಚಣ ದಂಡನಾಯಕ.

ರೇಚಣನು ಬಿಜ್ಜಳನನ್ನು ಕಲಚುರಿವಂಶ ಚಕ್ರವರ್ತಿಯೆನಿಸಿ ಸಿಂಹಾಸನದಲ್ಲಿ ಕಾಡಿಸಿದನು: ದಲ್ಲಪನು ತೃಲಪನನ್ನು ಕುಳ್ಳಿರಿಸಿದಂತೆ .ಚಾಳುಕ್ಯರ ರಾಜಧಾನಿಯಾದ ಕಲ್ಯಾಣವನೇ ತಮ್ಮ ರಾಜದಾನಿಯಾಗಿ ಮುಂದುವರಿಸಲು ಬಿಜ್ಜನಿಗೆ ರೇಚನು ಸೂಚಿಸಿದನು: ತೃಲಪನಿಗೆ ರಾಷ್ಟ್ರಕೂಟ ರಾಜದಾನಿಯಾದ ಮಳಖೇಡವನೇ ಮುಂದುವರಿಸಲು ವಿವೇಕ ಬೃಹಸ್ಪಿತಿ ದಲ್ಲಪನು ಸೂಚಿಸಿದಂತೆ .ಬಿಜ್ಜಳನಾದಮೇಲೂ ಆ ಕಲಚುರ್ಯ ರಾಜ್ಯವನ್ನು (ಮತ್ತಂ ಅದಂತಹ ಚಕ್ರಿಯಿಂದತ್ತಲುಂ ) ಅನಂತರ ಬಂದ ರಾಜರುಗುಳ ಆಡಳಿತ ನಿರ್ವಹಣಗೂ (ಒದವಿದ ರಾಜಾವಳೀ ಲೀಲೆಗಂ ) ರಾಜಾಡಳಿತದ ಏಳು ಅಂಗಗಳನ್ನು ದೊರೆಯುಉುವಂತೆ (ಸಪಾಂಗಮಂ ಕಾಣಸಿದನೆನೆ ) ರೇಚಣನು ಶ್ರಮಿಸಿದನು; ಮತ್ತು ರಾಜರಿಗೆ ಇರ ಬೇಕಾದ ರಹಸ್ಯಾಲೋಚನೆ, ಉಪಾಯ ,ಮತ್ತು ಪರಾಕ್ರಮ ಎಂಬ ಮೂರು ಬಗೆಯ ಶಕಿಗಳಿಂದ , ಸಂಪತ್ತು ಮತ್ತು ಸನ್ನಡತೆಯಿಂದ ರೇಚಣನೂ ಶೋಭಿಸಿದನು.

ಕಳಚುರ್ಯಕುಲದ ರಾಜರ ರಾಜ್ಯವೆಂಬ ಬಳಿಯು (ಕ್ಷಿತಿಪಾಳ ರಾಜ್ಯ ಲತೆ ) ಹಬ್ಬುವುದಕ್ಕೆ. ರೇಚರಸನು ತನ್ನ ತೋಳುಗಳೆಂಬ ಕೊಂಬೆಗಳನ್ನ ಚಾಚಿದನು (ದೋ:ಶಾಖೇಯಂ)ಎಂಬ ಮಹತ್ವದ ಹೇಳಿಕೆಯನ್ನು ಶಾಸನ ಸುಂದರವಾಗಿ ದಾಖಲಿಸಿದೆ.

ಬಿಜ್ಜಳ ರಾಜನ ಮಗಂದಿರಾದ ವಜ್ರದೇವ, ಸೋವಿ(ಯಿ) ದೇವ (೧೧೬೭-೭೬) , ಮೃಲುಗಿ ದೇವ -ಮಲ್ಲಿಕಾರ್ಜುನ (೧೧೭೬) , ಸಂಕ (ಗ) ಮ (೧೧೭೬-೮೦) ಮತ್ತು ಆಹವಮಲ್ಲ (೧೧೫ ೮೩) ಸಿಂಹಘಣ (೧೧೮೪)-ಇವರೆಲ್ಲರ ರಾಜ್ಯಾಡಳಿತಕ್ಕೆ ರೇಚಣನು ಸಹಾಯಕ ಸೇನಾಪತಿಯಾಗಿದ್ದನು. ರೇಚ ವಿಭುವೇ ಪರೋಕ್ಷ ಘ್ರಭು ವೆಂಬಂತೆ ಘ್ರಮುಖನಾಗಿದ್ದ ಕಳಚುರ್ಯ ಕ್ಷಿತಿಪಾಳರ ರಾಜ್ಯಲತೆ ದಾಂಗುಡಿಯಿಟ್ಟ ಪರ್ವಲು ಫ್ರೇರಕ ಶಕ್ತಿಯಾದನು. ಬಿಜ್ಜಳನ ಕಡೆಯ ಮಗನಾದ ಸಿಂಘಣನ ಕಾಲ ಮುಗಿದೊಡನೆ (೧೧೮೪) ರೇಚಣನು ಕಲಚುರಿಹಳ ಆಸ್ಥಾನ ತೊರೆಯಬೇಕಾಯಿತು.

ಕಳಚುರ್ಯರನ್ನು ಹೊಯ್ಸಳ ವೀರಬಲ್ಲಾಳನು (೧೧೭೩-೧೨೨೦) ಕ್ರಿ.ಶ. ೧೧೮೪ ರ ವೇಳೆಗೆ ಸಂಪೂರ್ಣವಾಗಿ ಸೋಲಿಸಿದನು. ರೇಚಣನು ಕೆಲವು ವರ್ಷಗಳವರೆಹೆ ಲೌಕಿಕ ಅಧಿಕಾರ ರಹಿತನಾಗಿದ್ದನು. ರಣರಂಗ ದರ್ಶನ ಬಿಟ್ಟು ಧರ್ಮ ಕ್ಷೇತ್ರಕ್ಕೆ ಅಭಿಮುಖನಾದನು. ಆದರೆ ರೇಚಣನು ಅನುಭವ ಭಂಡಾರದ ಸದುಪಯೋಗ ಆಗುಬೇಕೆಂಬ ಕಾಂಕ್ಷೆಯಿಂದ, ಫ್ರಾಯ: ಈತನು ಬಂಧುವಾದ ಹುಳ್ಳ ಭಂಡಾರಿಯ ಸೂಚನೆಯನ್ನು ಅನುಸರಿಸಿ, ರೇಚಣನನ್ನು ಹೊಯ್ಸಳ ಸಾಮ್ರಾಜ್ಯದಲ್ಲಿ ಮಂತ್ರಿ್ತಯಾಗಿ ಶ್ರೀಕರಣಾಧಿಕಾರಿಯಾಗಿ ನೇಮಿಸಲಾಯಿತು. ಯಾವ ಹೊಯ್ಸಳರೊಡನೆ ಐದಾರು ವರ್ಷದ ಹಿಂದೆಯಷ್ಟೆ ಎದುರಾಳಿಯ ಪಡೆಯನಾಯಕನಾಗಿ ನಿಂತು ಹೋರಾಟ ಮಾಡಿದ್ದನೊ ಅದೇ ಹೊಯ್ಸಳರಲ್ಲಿಯೇ ಒಲಗಿಸಿ ಬಾಳುವಂತಾಯಿತು: ಇದರಿಂದ ರೇಚಣನಿಗೆ ತೇಜೋವಧೆಯೇನೂ ಆಗಲಿಲ್ಲ, ತಕ್ಕ ಸ್ಥಾನಮಾನಗಳು ಲಭ್ಯವಾದುವು ಹೊಯ್ಸಳ ವೀರಬಲ್ಲಾಳನಲ್ಲಿ , ರೇಚಣನು ತ್ನ್ನ ಆಯಸ್ಸಿಗೆ ಉತ್ತ್ರಾರ್ಧವನ್ನು ಕಳೆದನು. ಸು. ೧೧೮೮ ರಿಂದ ೧೨೨೦ರವರೆಗೆ ,ವೀರ ಬಲ್ಲಾಳನ ಆಳ್ವಿಕೆ ಮುಗಿಯುವವರೆಗೆ ಹೊಯ್ಸಳ ರಾಜ್ಯಕ್ಕೆ ದುಡಿದಂತೆ ತೋರುತ್ತದೆ.

ಕ:ಳಚುರ್ಯರು ಸು. ೧೧೫೮ರಿಂದ ೧೧೮೪ ರವರೆಗೆ, ಸುಮಾರು ೨೬ ರ್ಷ ಆಳಿದರು. ಇಷೊ ವರ್ಷ ಸಾದ್ಯಂತವಾಗಿ ಆದರ ಭಾಗವಾಗಿದ್ದವನು ರೇಚಣದಂಡಾಧಿಪತಿ. ಈ ಸಂಗತಿಯು ಅನುಮಾನಕ್ಕೆ ಎಡೆಯಲ್ಲ ದಷ್ಟು ಸುಸ್ಪ್ ಷ್ಟವಾಗಿ ಶಾಸನದಲ್ಲಿದೆ. ರೇಚಣನು ಕಳಚುರ್ಯರ, ಕಡೆಯ ಬಲಿಷ ರಜನಾದ, ಆಹವಮ್ಮಲ್ಲನ ಕಾಲದಲ್ಲಿ ಮೂರು ಅಧಿಕಾರಗಳನ್ನು ಹೊಂದಿದ್ದನು. ಆಹವಮ್ಮಲ್ಲನ ಮಹಾಫ್ರ ಧಾನನೂ, ಬಾಹತ್ತರ ನಿಯೋಹಾಧಿಪತಿಯೂ, ದಂಡಾಧಿನಾಥನೂ ಆಗಿದ್ದ ರೇಚಣನು ಆದೇ ಅವಧಿಯಲ್ಲಿ ನಾಗರ್ಖೈಖಂಡಕ್ಕೆ ಅಧಿಪತಿಯಾಗಿ ಆಳುತ್ತಿದ್ದನು: [ಎ. ಕ. ೭-೧, ೧೯೭, ೧೧೮೦]

ತರದಿಂ ದೇಶಂಗಳು ಶ್ರೀ ಕಳಚುರಿಕುಳ ಚಕ್ರೇಶರಿರಂ ಪೆತ್ತುದೀ ನಾ

ಗರ ಖಣ್ಡ್ ಕ್ಷಿತಿ ವಟ್ಟಾ ನೃಪರೊಳಡೆದಿಂಬಿಂದವಾಳ್ದಿ ರ್ಪ್ವನಾ ರೇ

ಚರಸಂ ತಾನೆಂದೋಡೇ ವಣ್ಣಪುದೊ ನಿಸದವೀದೇ ಶದೊಂದೊಳ್ಮೆಯಂ ಬಿ
ತ್ತರದಿಂ ಪಂಕೇಜರೂಪ ಬನವಸೆಯದಱೊಳ ಶ್ರೀಯವೋಲಿರ್ಪುದೆಂಬೆಂ॥

[ಸಾಲು ೩೮–೩೯]

ಬನವಾಸಿ ದೇಶವು ವಿಸ್ತಾರವಾದ ತಾವರೆ ಹೂವಿನಂತಿದ್ದರೆ, ಅದರೊಳಗೆ ನಾಗರಖಂಡವು ಲಕ್ಷ್ಮಿ
ಯ ಹಾಗಿದ್ದಿತು. ಈ ನಾಹರ ಖಂಡವನ್ನು ಕಳಚುರಿಕುಳದ ಚಕ್ರೇಶರು ವಶ ಪಡಿಸಿಕೊಂಡಿದ್ದ ಅವಧಿಯಲ್ಲಿ, ಆ ಪ್ರದೇಶದ ಮೇಲ್ವಿಚಾರಣೆಯ ಹೊಣಯನ್ನು ಕಲಿ ರೇಚಣನಿಗೆ ದಂಡನಾಯಕನಿಗೆ ವಹಿಸಲಾಗಿತ್ತು. ವಸುಧೈಕ ಬಾಂಧವ ಎಂಬ ಬಿರುದನು ರೇಚಣನಿಗೆ ಇತ್ತವರು ಕಳಚುರಿ ಚಕ್ರವರ್ತಿಗಳು : ಕಳಚುರ್ಯ ಸಾಮಾಜ್ಯವ್ಮೆಂಬ ವಸುದೆಗೆ ಒಬ್ಬನೇ ಮಹಾವೀರನಾದ ಬಾಂಧವನೆನಿಸಿ ನೆಹಳುತ್ತಿದ್ದುದರಿಂದಾಗಿ ಸಹಜವಾಗಿಯೇ ಈ ಫ್ರದಸಿ ಫ್ರಾಪ್ತವಾಗಿದೆ. 'ವಸುಧೃಕ ಬಾಂಧನ' ಬಿರುದಾಂಕಿತನಾದ ರೇಚಣ ದಂಡಾಧಿಶ್ವರನಿಗೆ ನಾಗರ ಖಂಡಾಪತಿ ಯಾಗಿ ನೇಮಿಸಲು ಇದ್ದ ಇನೊಂದು ಫ್ರಬಲವಾದ ಕಾರಣ ಅದು ಆತನ ಜನ್ಮಸಳವಾದ ಲಕ್ಕುಂಡಿಗೆ ಸಮಿಪದಲ್ಲಿ ಇದುದು.
ರೇಚಣನಿಗೆ ಆಪ್ತಮಂತ್ರಿಯಾಗಿದ್ದವನು ಬೊಪ್ಪ ಭೂಪ. ನಾಗರ ಖಂಡದ ಪರಿಸರವಷ್ಟೊ ಫ್ರ ಧಾನವಾಗ ಸವಣರ ಶಿಷ್ಯ ಸಂಪತ್ತಿನಿಂದ ಕೂಡಿತ್ತು. ನಾಳ್ಗಾವುಂಡ ನಾಗಾರ್ಜುನ, ನಾಲ್ಗಾವುಂಡಿ ಜಕ್ಕಿಯಬ್ಬೆ ಮೊದಲಾದವರು ಇಲ್ಲಿ ಸವಣರ ಅಹಿಂಸಾ ಸಂದೇಶದ ಕಾಳುಗಳನ್ನು ಬಿತ್ತಿ ಭೆಳೆ ತೆಗೆದಿದ್ದರು [ಎ.ಕ. ೮, ಸೊರಬ ೨೩೪, ೧೧೦೦, ಹಿರೇಚಟವು (ರಾಜಿ/ಸೊರಬ ತಾ. )]

ಅದರ ಕೂಂಡಿ ಹಿಡಿದು ಹೊರಟ ರೇಚಣನೂ ಬೊಪ್ಪನು ನಿಷಾವಂತ ಜೈನರಾಗಿದ್ದರು. ಆಡಳಿತಾತ್ಮಕ ಗಂಟಿನೊಂದಿಗೆ ಧಾಮೀಕ ನ್ಂಟೂ ಇತ್ತು. ಅಂಡುರವರ ವಂಶದ ಬೊಪ್ಪನು ಚಿಕ್ಕಮಾಗಡಿ ಸಾಮಂತರ ಕುಟುಂಬದವನು: ಶಾಸನೋಕ ಆಧಾರಗಳಿವೆ.

ರೇಚಣನ ಆಪ ಮಂತ್ರಿಯಾದ ಬೊಪ್ಪನು. ದಾನಿ ವೀರ ಮತ್ತು ಉದಾತ್ತ ಜಿನಭಕ್ತ. ಬೊಪ್ಪನು ರಾಜಧಾನಿ ಬಾಂಧವಪುರ: ಅಲ್ಲಿ ಶಾಂತಿನಾಥ ಚೈತ್ಯಾಳಯವಿತ್ತು. ಅದರ ಸ್ಥಾನಾಚಾರ್ಯರು ಭಾನುಕೀರ್ತಿ ಸಿದಾಂತರು ಮತ್ತು ಅವರ ಶಿ ಷ್ಯರಾದ ನಯಕೀರ್ತಿ ಬ್ರತಿನಾಯಕರು. ಸಾಮಂತ ಶಂಕರನು ಕ್ರಿ. ಶ. ೧೧೭೮ರಲ್ಲಿ ಮಾಗುಡಿಯಲ್ಲೊಂದು ಜಿನಹೃಹವನ್ನು ಮಾಡಿಸಿದನು. ಭುವನ್ಯಕ ಮಂಡನವೆನಿಸಿದ ಆಜಿನಾಲಯಕ್ಕೆ ಮುನಿವರನಾದ ಪ್ರಸಿದ್ಧ ಭಾನುಕೀರ್ತಿಸಿದ್ಧಾಂತಿಯು ಉತ್ತಮ ತಳವೃತ್ತಿಯನಿತ್ತನು. ಅದೇ ವೇಳೆಗೆ ಸರಿಯಾಗಿ ಕಳಚುರ್ಯ ಚಕ್ರವರ್ತಿಯಾದ ಸಂಕಮದೇವ ಚಕ್ರಿಯು (೧೧೭೬-೮೦), ಹೊಯ್ಸಳರ ಬಲ್ಲಾಳ ಭೂಪಾಳನನ್ನು ತ್ನ್ನ ಪದಾಬ್ಜ ಸೇವೆಗೆ ತರಬೇಕೆಂದು ಶೌರ್ಯಾವಷ್ಟಂಬದಿಂದ ತನ್ನ ಸೃನ್ಯ ಮತ್ತು ದಂಡಾನಾಯಕರ ಸಮೇತ ನಡೆತಂದು ತಾಳುಗುಂದ ನಡೆವೀಡಿನಲ್ಲಿ ಹಲವು ದಿವಸಗಳ ವರೆಗೆ ಬೀಡು ಬಿಟ್ಟದ್ದನು.

ಕಳಚುರ್ಯರ ಸಂಕಮದೇವನ ದಂಡಾಧಿಪತಿಗಳಲ್ಲಿಯೇ ಪ್ರದಾನನಾದ ರೇಚಣ ದಂಡಾಧೀಶ್ವರನು ಸಹ ತನ್ನ ಚ ಕ್ರವರ್ತಿಯೊಂದಿಗೆ ತಾಳಗುದದಲ್ಲಿದ್ದನು. ಆ ಸಮಯದಲ್ಲಿ ಚಿಕ್ಕಮಾಗಡಿಯಲ್ಲಿ ಕಟ್ಟಿಸಲಾದ ಹೊಸಬಸದಿಯ ಜಿನೇಶ್ವರನ ಪದಾಭಿವಂದನೆಗೆಂದು ತಾಳಗುಂದದಿಂದ ರೇಚಣನೂ ಆಗಮಿಸಿದನು:

ಬನ್ದು ಜಿಃನೇಶ್ವರ ಪದಮಂ
ಬನ್ದಿಸಿ ಜಿನಮುನಿ ಪದಾಂಬುಜಕ್ಕೆಱಗಿ ಜಿನೋ
ನ್ನನ್ತಿರಮಂ ನೋಡಿ ದೃಡಾ
ನನ್ದಂ ವಸುಧೈಕ ಬಾನ್ದವಂ ಬಣ್ಣಿಸಿದಂ ॥ [ಅದೇ:ಸಾಲು ೯ಳ]

ಅಂತು ಪೊಗಳು ತ್ರಿ‌‍ಭೋಗಾ
ಭ್ಯಂತರವಾಗಿರ್ದ್ದ ತಳವೆಯಂ ಸರ್ವ್ವನಮ
ಶ್ಯಂತೇಜೋ ಸಾಮ್ಯ ಸಮೇ
ತಂ ತಜ್ಜಿನ ಪೂಜೆಗೆನ್ದು ಪರಿಕಲ್ಪಿಸಿದಂ॥

ರೆಚಣನೊಂದಿಗೆ ಬೊಪ್ಪ ಭೂಪನೂ, ಶಂಕರ ಸಾಮಂತನೂ ಬಂದರು ಮಾಗುಡಿಯ ಬಸದಿಯಲ್ಲಿ ರೇಚಣನು ಪೂಜೆ, ಮುನಿವಂದನೆ ಮಾಡಿ, ನೂತನ ಜಿನಗೃಹವನ್ನು ಶ್ಲಾಘಿಸಿ, ಹೊನ್ನು ಮನೆ ಸಹಿತ ತೆರಿಗೆಗಳನ್ನು ಬಿಟ್ಟುಕೊಟ್ಟನು.

ಮುಂದೆ ಮತ್ತೆ ಕ್ರಿ.ಶ. ೧೧೮೦ ರಲ್ಲಿ, ಆಗ ಕಳಚುರ್ಯ ಮಹಾರಾಜಗಿದ್ದ ಆಹವಮಲ್ಲನು ದಕ್ಷಿಣಕ್ಕೆ ಬಂದು, ಮೊದೆಗನೂರು ನೆಲೆವೀಡಿನಲ್ಲಿ ಬೀಡು ಬಿಟ್ಟಿದ್ದನು. ಆಹವಮಲ್ಲನಿಗೆ ಲಕ್ಷಣ ಚಂದಣ ರೇಚಣ ಸೋವಣ ಚಾವಣ ಎಂಬ ಐವರ ಸಚಿವ ಸಂಪುಟವಿದ್ದಿತು. ಇವರಲ್ಲಿ ರೇಚಣನು ಮಹಾಪ್ರಧಾನನೂ ಬಾಹತ್ತರ ನಿಯೋಗಾಧಿಪತಿಯೂ ಆಗಿದ್ದನು [ಸ ಂಸ್ಕೃತ:ದ್ವಿಸಪತಿ, ಪ್ರಾಕೃತ: ಬಾಹತ್ತರ] ಬಾಹತ್ತರ ನಿಯೋಹವೆಂದರೆ ಆರಮನೆಯ ರಾಜರಾಣಿಯರಿಗೆ ಎಪ್ಪತ್ತೆರಡು ನ್ಬಗೆಯ ಸೇವೆ ಮಾಡುವವರ ಸಮೂಹ; ಈ ಸೇನಾ ಸಮೂಹಕ್ಕೆ ಮುಖ್ಯಸ್ಥನಾಗಿ ನಿಯಮಿತನಾದ ಅಧಿಕಾರಿಯನ್ನು 'ಬಾಹತ್ತರ ನಿಯೋಗಾಧಿಪತಿ' ಎಂದು ಕರೆಯುತ್ತಾರೆ [ಎ.ಇ. ೧೫,೮೦.೧೦೭೦: ಸೌ. ಇ.ಇ. ೯-೧, ೩೧೭. ೧೨೨೩. ಕೋಗಳಿ (ಬಳ್ಳಾರಿಜಿ. /ಹಡಗಲಿ) ಪು.೩೩೨] ಮಹಾ ಪ್ರಚಣ್ಡ ದಣ್ಡ ನಾಯಕನಾದ ಈ ರೇಚಿದೇವರಸನು ಮಾಗುಂಡಿಯಲ್ಲಿನ ರತ್ನತ್ರ ಯ ಬಸದಿಯ ಆಚಾರ್ಯರಾದ ಭುನುಕೀರ್ತಿ ಸಿದ್ದಾಂತಿ ದೇವರನ್ನು ಮೊದೆಗನೂರಿಗೆ ಬರಮಾಡಿಕೊಂಡನು. ಸಮಧಿಗತ ಪಂಚಮಹಾಶಬ್ದನೂ, ಮಹಾಮಂಡಳೇಶ್ವರನೂ, ಬನವಾಸಿ ಪುರ ವರಾಧೀಶ್ವರನೂ,ಪದ್ಮಾವತೀ ದೇವಿ ಲಬ್ಧವರ

ಘ್ರ ಸಾದನೂ ಆದ ಬೊಪ್ಪದೇವನು ತ್ರಿಭೋಗಾಭ್ಯಂತರ ವಿಶುದ್ದಿಯಿಂದ ಸರ್ವಬಾಧಾ ಪರಿಹಾರವಾಗಿ ಸರ್ವನಮಶ್ಯವಾಗಿ ಹಳ್ಳಿಯನ್ನೂ ತಳವೃತ್ತಿಯನೂ (ಬಾಡಂ ತಳವೆಯಂ) ಈ ಮೊದಲೇ ಏರ್ಪಾಟು ಮಾಡಿದ್ದನು. ಅದನ್ನು ರೇಚಣನು ಕ್ರಿ.ಶ. ೧೧೮೦ ರಲ್ಲಿ ಶುದ್ದ ಪಂಚಮಿ ಬುಧವಾರದ ದಿವಸ, ರತ್ನತ್ರ ಯದೇವರ ಅಭಿಷೇಕಾದಿ ಅಂಗರಂಗ ಭೋಗಕ್ಕೂ, ಷಿಯರ ಆಹಾರ ದಾನಕ್ಕೊ, ವಿದ್ಯಾರ್ಥಿಗಳ ಸೌಕರ್ಯಕ್ಕೊ. ಖಣ್ಡ ಸುಟಿತಜೀರ್ಣೋದ್ದಾರಕ್ಕೂ ಕೊಟ್ಟನು. ನ್ ಮುಲಸಂಘ ಕ್ರಾನೂರ್ಗನದ ತಿಂತ್ರ್ರಿಕ ಗಚ್ಚದ, ನುನ್ನವಂಶದ ಭಾನುಕೀರ್ತಿ ಸಿದ್ದಾಂತದೇವರ ಪಾದ ತೊಳೆದು ರೇಚಣ ಮಹಾಘ್ರಧಾನನು ದಾನವನ್ನು ಘ್ರದಾನ ಮಾಡಿದನು ಮತ್ತು ಕಾವ್ಯ ಕಳಾಧರ ಎನಿಪ ಮುರಾರಿ ಕೇಶವದೇವನಿಗೆ ಈ ಧರ್ಮ ಪ್ರತಿಪಾಲನೆಯ ಹೊಣಯನ್ನು ವಹಿಸಿದನು. ಶಿವಮೊಗ್ಗ ಜಿಲ್ಲೆಶಿಕಾರಿಪುರ ತಾಲೂಕಿನಲ್ಲಿ ಇರುವ ಚಿಲ್ಲಮಾಗಡಿ ಗ್ರಾಮದ ಚನ್ನಬಸವಣ್ಣನಗುಡಿಯು ಹಿಂದೆ ಜೈನರ ಬಸದಿಯಾಗಿತ್ತು.ಈದೇವಸ್ಥಾನದ ಮುಂದೆ ನೆಟ್ಟಿರುವ ದೊಡ್ಡ ಕಲ್ಲಿನ ಮೇಲೆ ಕೆತ್ತಲಾಗಿರುವ ಸುದೀರ್ಘವಾದ ಶಾಸನವು ಚಾರಿತ್ರ್ರಿಕ ಮಹತ್ವದ ಸಂಗತಿಗಳನ್ನು ಒಳಗೊಂಡಿದೆ. ಈಶಾಸನದ ಕೆಲವು ಮಹಾತ್ವಾಂಶಗಳನ್ನು ಹೀಗೆ ಕ್ರೋಢೀಕರಿಸಬಗುದು:

೧. ರೇಚಣನ ಬಗೆಗೆ ಸಿಗುವ ಅಪರೂಪದ ವಿವರಗಳು

೨. ಚಾಳುಕ್ಯ ಚಕ್ರವರ್ತಿಗಳ ರಾಜಾವಳಿ

೩. ಕಳಚುಕ್ಯ ಚಕ್ರಿಗಳ ರಾಜಾವಳಿ: ಬಿಜ್ಜಳನ ತಮ್ಮ ಮೈಳುಗಿ ದೇವನ ವಿಚಾರ

೪. ಕಳಚುರ್ಯಕುಲ ಸ್ಥಾಪನೆಯಲ್ಲಿ ರೇಚಣ ದಂಡಾಧಿಶನ ವಿಶಿಷ್ಟ್ಯ ಪಾತ್ರ

೫. ಸಂಕಮದೇವನು ಹೊಯ್ಸಳ ಬಲ್ಲಾಳ ಮೇಲೆ ದಂಡೆತ್ತಿ ಬಂದು ತಾಳಗುಂದದಲ್ಲಿ ಹಲವು ಕಾಲ ತಂಗಿದ್ದುದು

೬. ಕಲಚುರಿ ಕುಲದ ಸಂಕದೇವ ಚಕ್ರ್ರಯ ದಂಡಾಧಿಶ್ವರನಾದ ರೇಚಣನು ಮಾಗುಂಡಿ (ಮಾಗುಂಡಿ–ಮಾಗಡಿ ಚಿಕ್ಕ ಮಾಗಡಿ) ಗೆ ಬಂದುದು

೭. ಚಿಕ್ಕ ಮಾಗಡಿ ಸಾಮಂತರ ವಂಶಾವಳಿ

೮. ಮಹಾಮಂಡಲೇಶ್ವರ ಬನವಾಸಿ ಪುರವರಾಧಿಶ್ಯ್ವರ ಬೊಪ್ಪದೇವನ ವಿಚಾರ

೯. ಶಾನಿನಾಥ ಬಸದಿ ಮತ್ತು ರತ್ನತ್ರಯ ಜಿನಾಲಯ

೧೦. ಭಾನು ಕೀರ್ತಿ ಸಿದ್ಧಾ ೦ತದೇವನ ಪರಿಚಯ : ನುನ್ನ ವಂಶದ ಉಲೇಖ.

೧೧. ಕ್ರಾನೂರ್ಗಣ ಗುರುಗಳು

೧೨. ವೃತ್ತ. ಕಂದ ಮಿಶ್ರಿತ ಪುಟ್ಟ ಚಂಪೂ ಕಾವ್ಯವಾದ ಈಶಾಸನ ಕವಿಯ ಸೃಜನಶಕಿ ಮತ್ತು ಭಾಷಾಪ್ರೌಢಿಮೆಯ ಪರಿಚಯ.ಕನ್ನಡ ನಿಘಂಟಿನಲ್ಲಿ ಮುಖ್ಯ ಉಲೇಖವಾಗಿ ಇನ್ನು ಮುಂದೆ ಹೊಸದಾಗಿ ಸೇರ್ಪಡೆಯಾಹಬೇಕಾದ ಅಪೂರ್ವ ಶಬ್ದಹಳ ಬಳಕೆಯಿದೆ. ನಡೆವೀಡು (ಪು.೨೯೦.ಸಾಲು ೯೩) ತೇಜೋಸಾಮ್ಯ (ಸಾಲು ೯೫) ತಳವೆ (ಸಾಲು ೧೦೨) ಎಂಬ ಶಬ್ದಗಳು ಈಗ ಅಚಾಗಿರುವ ನಿಘಂಟನಲ್ಲಿ ಇಲ್ಲ. ಈ ಮೂರೂ ಶಬ್ದಗಳಿಗೆ ಕಮವಾಗಿ ಅರ್ಥ: ನಡೆವೀಡು= ರಾಜ ಸೃನ್ಯ ಫ್ರಯಾಣ ಕಾಲದಲ್ಲಿ ಬಿಟ್ಟ ಬಿಡಾರ. ತೇಜೋಸಾಮ್ಯ = ಹೊನ್ನು ಮತ್ತುಮನೆ ಸಹಿತರವಾಗಿ ಕೊಟ್ಟದಾನ. ತಳವೆ =ತಳವೃತ್ತಿ

ಮೇಲ್ಕಂಡ ಶಾಸನದಲ್ಲಿ ಎರಡು ಭಾಗಗಳಿವೆ ಎಂಬುದನೂ ಚರಿತ್ರಾಕಾರರು ಗಮನಿಸಿಲ್ಲ. ರೇಚಣನು ಕಳಚುರ್ಯರ ಆಹವಮಲ್ಲನಿಗೆ ಮಹಾಫ್ರಧಾನನೂ, ಬಾಹತ್ತರ ನಿಯೋಗಾಧಿಪತಿಯು ಆಗಿದ್ದನೆಂಬುದು ಶಾಸನದ ಉತ್ತರಾರ್ಧ. ರೇಚಣನು ಸಹ ತನ್ನ ಪೂರ್ವಜರಂತೆ ಮಹಾಸಾಹಸಿ, ಯುದ್ದವೀರ ಮತ್ತು ನಿಷಾವಂತನಾದ ಜಿನಭಕ. ಅವನ ರಣಶೌರ್ಯವನೂ ಔದಾರ್ಯ್ಯದ ಆಧಿಕ್ಯವನೂ ಶಾಸನಗಳು ಕೊಂಡಾಡಿವೆ;

ಅನುಪಮದಾನ ಶೌರ್ಯಮನೇವೊಗಳ್ವಪ್ಪೆ ನಾಂ ದ್ವಿಷ

ಜ್ಜನಿಪರೊಳೆಂದುವಚರಸಿಯರ್ಗ್ಗೆ ಸಯಂಬರವಾಗ ಸಗ್ಗದೊಳ

ಜನಿಯಿಸಿತಿಂದ್ರ ಭೂರುಹಕ್ಕೆ ತೋರಣದಿಂ ತವಿಲ್ಗೆಂಬುದೆಯ್ದ ಮೇ

ದಿನಿ ವಸುಧೈಕಬಾಂಧವಚಮೂಪತಿ ರೇಚಣನೇಂ ಕೃತಾರ್ತ್ಥನೋ ॥ [ಸಾಲು ೩೩–೩೫]

ಪೆಡೆವಣ ಶೇಷನೊಳರಸಿಜೋದರನಂಬುಧಿಯೊಳ ಮೃಗಾಂಕವಂ
ದುಡುಪನೊಳದ್ರಿ ಜಾರ್ದ್ದವಭವಾಂಗದೊಳಾ ಮದಲುಬ್ಧ ಭೃಂಗ ವಿ
ರ್ಪ್ಪಡೆ ದಿಗಿಭಂಗಳೊಲು ಕುಱಿಪು ದೋರ್ಪ್ಪಿನೆಗಂ ಜಗಮಂ ಮುಸುಂಕಿತಿಂ
ಗಡಲೆನೆ ಕೀರ್ತಿ ರೇಚಣಸೆದಂ ಜಸದಿಂ ವಸುಧ್ಯಕ ಬಾಂಧವಂ ॥ [ಸಾಲು ೩೫–೩೬]

ಕ್ರಿ. ಶ. ೧೧೮೦ ರ ವೇಳೆಗೆ ಆಗಲೇ ರೇಚಣ ಧರ್ಮ ಪರಾಯಣತೆ, ಸಾಹಿತ್ಯಾ, ಸಕ್ತಿ, ಲೇಖಕರನ್ನು ಪ್ರೋತ್ಸಾಹಿಸುವ ಗುಣ–ಇವು ಕೀರ್ತಿಸಲಟ್ಟದ್ದುವು:

ಜಿನನಂ ತಂನ ಮನಂ ಮನ: ಘ್ರಕೃತಿಯಂ ಸದ್ವಿದ್ಯೆಯಾ ವಿದ್ಯಯಂ
ತನುವಂತಾತನುವಂ ವಿಳಾಸವದನುದ್ಯ ಲ್ಲಕ್ಷಿಯಾ ಲಕ್ಷಿಯಂ
ವಿನುತೌದಾರ್ಯವದಂ ಜಗಂ ಜಗಮನಿಂಬೀಕೀರ್ತಿಯಾಲ್ಲಿಂಗಿಸ
ಲ್ಜನ ವಂದ್ಯಂ ವಿಭುರೇಚಿರಾಜನೆಸೆದಂ ಚಾರಿತ್ರ ರತ್ನಾಕರಂ ॥[ಸಾಲು ೩೦–೩೧]
ಕವಿಸತಿ ಬಲೆಗೋಲಗಿಸೆ ಕಾಮಿನಿಯಸ್ಸೋಬಗಿಂಗೆ ಸೋಲೆ ಬೇ
ಳವರ್ಗ್ಗಳುದಾರ ವೃತಿಗೊಲವಿಂ ನರ ಶಾಸವಾಗೆ ರಾಜ್ಯಮು
ದ್ಭವದಿನೊಡರ್ಚೆಜೈನ ಸಮಯಾಂಭುಧಿ ಕೀರ್ತಿ ಸುಧಾಂಶುವಿಂ ಪೊದ
ಳ್ಕೆವಡೆಯೆ ರೇಚರಾಜನೆಸೆದಂ ಜಸದಿಂ ವಸುಧ್ಯಕ ಬಾನ್ಧವಂ॥ [ಸಾಲು ೩೧–೩೨]

ಜೈನಶಾಸನಗಳನ್ನು ಜಿನಸುತ್ತಿಯಿಂದ ಆರಂಭ ಮಾಡುವುದು ವಾಡಿಕೆ. ಆದರೆ ಒಂದು ಸರ್ವಾಂಗ ಜೈನ್ನ ಶಾಸನವನ್ನು ಆರಭಿಸುವು ದಕ್ಕೆ ಮೊದಲು, ರೇಚಣನನ್ನು ಒಂದು ವೃತ್ತ ಪದ್ಯದಲ್ಲಿಸುತ್ತಿಮಾಸ್ಡಿ ಅನತಂರ 'ಶ್ರೀ ಮತ ಪರಮಗಂಭಿರ .......' ಎಂಬ ವಾಡಿಕೆಯ ಶೋಕದಿಂದ ಮುಂದುವರಿಸಲಾಗಿದೆ. ಇದು ರೇಚಣನು ತನ್ನ ಸಮಕಾಲೀನ ಸಮಾಜದ ಮೇಲೆ ಬೀರಿದ್ದ ಗಾಢವಾದ ಪ್ರತಿಫಲ್ಲಿಸುತ್ತದೆ. ಆಚಂಪಕಮಾಲೆಯ ವೃತ್ತ ಪದ್ಯ ಹೀಗಿದೆ: [ಎ. ಕ.೭-೧, ಶಿಕಾರಿಪುರ ೨೨೫, ೧೨೦೩-೪೦, ಚಿಕ್ಕಮಗಡಿ, ಪು. ೩೦೧]

ಕವಿನಿವಹಸುತ್ತ್ರಂ ನೆಗಳ್ದ ರೇಚ ಚಮೂಪತಿಯಿಂ ಬಳಿಕ್ಕಮಾ

ಭುವನದೊಳಿಂತನಂತ ಜಿನಧರ್ಮ್ಮವನುದ್ದರಿಪದ್ರ್ಧರೆಚನಂ

ಸುವಿದಿತಮಾಗೆ ಬಾಂಧವು ಪುರಾಧಿಪ ಶಾನಿ ಜಿನೇಶ ತೀರ್ತ್ಥಮಂ

ಕವಡೆಯಬೊಪ್ಪನುದ್ದರಿಸಿದ್ದಂ ಯದುವಲ್ಲಭ ರಾಜ್ಯಭೂಷಮಂ

ಈ ಪದ್ಧದಲ್ಲಿರುವ ಮತ್ತೊಂದು ಸ್ವಾರಸ್ಯವೆಂದರೆ,ರೇಚಣ ಚಮೂಪತಿಯ ತರುವಾಯ ಜಿನಧರ್ಮವನ್ನು ಉದ್ದರಿಸಿದ ಕವಡೆಯ ಬೊಪ್ಪನನ್ನು 'ಅರ್ಧರೇಚ' ನೆಂದು ಕರೆಯಲಾಗಿದೆ. ರನ್ನಕವಿ ಅಜಿತಪುರಾಣದಲ್ಲಿ ಒಂದು ಪದ್ಯದಲ್ಲಿ, ತನ್ನ ಕಾಲದವರೆಗೆ ಜಿನರ್ಧಮವನ್ನು ಪ್ರ ಭಾವಶಾಲ್ಲಿಯನ್ನಾಗಿ ಮಾಡಿದ ಬೂತುಗ, ಮರುಳ, ಮಾರಸಿಂಹ ,ಶಂಕರಹಂಡ, ಚಾವುಂಡರಾಯ ಮತ್ತು ಎಲರಿಗೂ ಮಿಗಿಲಾಗಿ ಆತ್ತಿ ಮಬ್ಬೆ-ಇವರನ್ನು ಸರಿಸಿದ್ದಾನೆ. ಅದೇ ಮಾದರಿಯಲ್ಲಿ ಅತ್ತಿಮಬ್ಬೆಯ ಮನೆತನದ ಕುಡಿಯಾದ ರೇಚಣನೂ ಕೂಡ ರ್ಧಮ ಪರಾಯಣನಾಗಿದ್ದು ಅನ್ಯರಿಗೆ ಆದರ್ಶ ಪ್ರಾ ಯನಾಗಿದ್ದನು.

ತನ್ನ ಮನೆತನವು ದೇವಾಲಯಗಳ ನಿರ್ಮಾಣಕ್ಕೆ ಸಹಾಯಮಾಡಿದಂತೆ ಸಾಹಿತ್ಯ ಸೃಷ್ಟಿಗೂ ನೆರವಾಗಿತ್ತೆಂಬುದನ್ನು ಅರಿತ ರೇಚಣನು, ಈ ಎರಡೂ ಕ್ಷೇತ್ರಗಳಲ್ಲಿ ತಾನೂ ಕ್ರಿಯಾಶಿಲನಾದನು. ಆಚಣ್ಣನೆಂಬ ಕವಿಗೆ ಆಶ್ರ್ರಯ ನೀಡಿದನು. ಆ ವೇಳೆಗಾಗಲೆ ಇಬ್ಬರು ಪ್ರ ಯತ್ನಿಸಿದರೂ ಮುಗಿಯದೆ

ಮುಂದುವರಿಯದೆ, ಆರೆಬರೆಯಾಗಿಯೇ ಉಳಿದಿದ್ದ ವರ್ದಮಾನಪುರಾಣವನ್ನು ಸಮಗ್ರವಾಗಿ ಪುನರರಚಿಸಿ ಪೂರಸುವಂತೆ ಆಚಣ್ಣ ಕವಿಗೆ ರೇಚಣದನು ಆದೇಶಿಸಿದನು. ತನ್ನ ಆಶ್ರಯದಾತನ ಅಪೇಕ್ಷಯಂತೆ ರೇಚಣನು ವರ್ಧಮಾನ ಪುರಾಣವನ್ನು ಬರೆದು ಪೂರೆಸಿದನು. ಹದಿನಾರು ಆಶ್ವಾಸಗಳ ಈಚಂಪೂ ಕಾಪ್ಯದಲ್ಲಿ ಆಚಣ್ಣ ಕವಿಯು ರೇಚಣನನ್ನು, ಕಾಪ್ಯ ದ ಆರಂಭ ಹಾಗೂ ಅಂತ್ಯದ ಆಶ್ವಾಸಗಳಲ್ಲಿ, ಮುಕ್ತ ಕಂಠದಿಂದ ಶಾಘಸಿಡ್ಡಾನೆ. ಅಲ್ಲದೆ ವರ್ದಮಾನ ಜಿನರನೂ ರೇಚರಸನನೂ ಅಭೇದಗೊಳಿಸಿ ಸ್ತುತಿಸಿದಾನೆ; ಘ್ರತಿ ಆಶ್ವಾಸಾಂತ ಗದ್ಯದಲ್ಲಿಯು ಈ ಸೂಚನೆ ಸ್ಪ್ಷ್ಟವಾಗಿ ವಕ್ತ ಪಟ್ಟಿದ . ಕಾವ್ಯವನ್ನು–"ವಸುಧ್ಯಕ ಬಾಂಧವ ಶ್ರೀ ವರ್ಧಮಾನ ಪುರಾಣ' ಎಂದು ಆಚಣ್ಣಕವಿ ನಾಮಕರಣ ಮಾಡಿದ್ದಾನೆ.

ಆಚಣ್ಣ ಕವಿ ರೆಚಣ ದಂಡೇಶನನ್ನು ಪರಿಚಯಿಸಿದ್ದರೂ, ರೇಚಣನು ಈ ಕಾವ್ಯ್ರಚನೆಯೆ ಅವಧಿಯಲ್ಲಿ ಯಾವ ರಾಜನ ಆಸರೆಯಲ್ಲಿ ಇದ್ದನೆಂಬುದದನು ಸ್ಫೆಷ್ಟವಾಗಿ ನಮೊದಿಸಿಲ್ಲ . ವಸುಧ್ಯಕ ಬಾಂಧವನಾದ ದಂಡನಾಥ ರೇಚರಸನ ಬಂಧುರ ಭಕಿಗೆ ಮೆಚಿ, ಈ ಹಿಂದೆತನ್ನ (ಆಚಣಕವಿಯ) ತಂದೆ ಕೇಶಿರಾಜನೂ (ಕೇಶಿಮಯ್ಯ್ ದಂಡ ನಾಯಕ )ಮತ್ತು ತೆಕ್ಕಣ– ಚಾಮಣರೂ ಸೇರಿ ಆರಂಭಿಸಿದ್ದ , ವರ್ದಮಾನ ಪುರಾಣವನ್ನು ತಾನು (ಆಚಿವಿಭು) ಪೂರೆಸಿದುದಾಗಿ ಆಚಣ್ಣನು ನಿವೇದಿಸಿಕೊಂಡಿದಾನೆ. ಕಾವ್ಯದ ಒಳಹೊರಗಿನ ಸುಳಿವು ಸೂಚನೆಗಳ ಎಳೆಗಳನ್ನು ಹಿಡಿದು ಕೂಡಿಸುವುದರ ಮೂಲಕ,ಇದರ ರಚನೆಯ ಕಾಲವನ್ನು ವರ್ಧಮಾನ ಪುರಾನವನ್ನು ಬರೆದು ಪೂರೆಸಿದ ಎಂಬುದನ್ನು ಅನುವೋದಿಸಲು ಆತನು ರೇಚಣನನ್ನು ಪರಿಚಯಿಸಿರುವ ಕೆಳಕಂಡ ಪದ್ಯ ಸಹಾಯಕವಾಗಿದೆ.

ಶ್ರೀಕರಣಾಗ್ರಗಣ್ಯ ನಭಿಮಾನ ಜಿನೇಂದ್ರ ಮತಾಬ್ಜ ಭಾನು ಪು
ಣ್ಯಾಕರನರ್ಥಿ ಕಲತರು ಭೋಗ ಪುರಂದರನಂಗಜೋಪಮಂ
ಬೀಕರ ವೃರಿ ವಾರಣ ವಿದಾರಣ ಕೇಸರಿಸತ್ಕಳಾಢ್ಯನ
ಸ್ತೋಕ ಯಶೋರ್ಥಿ ರೇಚಣವಿಭು ರಂಜಿಸಿದಂ ವಸುದ್ಯಕ ಬಾಂಧವಂ॥ (೧–೨೨)

ಕಳಚುರಿ ಚಕ್ರವರ್ತಿಗಳಲ್ಲಿ ರೇಚಣನು ಸೇನಾನಿ , ಮಹಾಪ್ರಧಾನಿ, ಬಾಹತ್ತರ ನಿಯೋಗಿ ಆಗಿದ್ದನು. ಕಳಚುರಿಗಳ ಆಳ್ವಿಕೆಯು ೧೧೮೩-೮೩ ರಲ್ಲಿ ಅಂತ್ಯವಾಯಿತು. ಅದಾದ ಕೆಲವು ವರ್ಷ ರೇಚಣನು ನಿರಧಿಕಾರಿಯಾಗಿನು. ಕ್ರಿ. ಶ. ೧೧೮೮ರ ವೇಳೆಗೆ ರೇಚನನು ಹೊಯ್ಸಳ ಬಳ್ಳಾಳನಲ್ಲಿ ಶ್ರೀಕರಣನಾಗಿಯೂ ಮಂತ್ರಿ್ರಯಾಗಿಯೂ ಸೇರಿ ದ್ದನು. ಛಿದರಿಂದ ಈ ಕಾವ್ಯರಚನೆಯ ಕಾಲವು ೧೧೯೦ ಎಂಬುದು ಸಮಂಜಸವಾಗಿದೆ.

ವರ್ಧಮಾನಪುರಾಣವನೇ ಬರೆಸಲು ಒಂದು ವಿಶಿಷ್ಟವಾದ ಐತಿಹಾಸಿಕ ಕಾರಣವಿದೆ. ಈ ಕಾವ್ಯ ರಚನೆ ಆರಂಭವಾದದ್ದು ಕೇಶಿಮಯ್ಯಿ್ನಂದ. ಕೇಶಿಮಯ್ಯುನು ರೇಚಣನು ಆಪ್ತನೂ, ಧಮಬಂಧುನೂ ಆಗಿದ್ದು

ಫಲ್ಲದೆ, ರೇಚಣ ನೊಂದಿಗೆ ಕಳಚುರ್ಯ್ಯ್ ಆಹವಮಲ್ಲನಲ್ಲಿ ದಂಡನಾಯಕನಾಗಿದ್ದನು.ಬನಸೆನಾಡಿನ ಒಡೆದು ನಾಗಿದ್ದನು. [ಎ.ಕ..೭-೧ ಶಿಕಾರಿಪುರ ೧೧೯] ಕೇಶವರಾಜ (ಕೇಶಿಮಯ್ಯ್) ನ ಹಿರಿಯ ಮಗನೇ ಕವಿ ಆಚಣ: ಕಿರಿಯಮಗನಾದ ಶಂಖನು ಪುಲಿಗೆಱಗೆ ಒಡೆಯಲಾಗಿದ್ದನು. ಕೇಶಿಮಯ್ಯ್ (ಕೇಶಿರಾಜ)ನು ಬನವಾಸಿಯನ್ನು ಆಳುತ್ತಿದಾಗ ನರಸಿಂಹ ನಾಯಕ, ತಿಕ್ಕರಾಜ ಚಾಮಯ್ಯ್, ಬಾಚಯ್ಯ್, ಸೋವಿದೇವ, ದಾಸಿರಾಜ ಎಂಬುದು ಸಚಿವರಾಗಿದ್ದರು. ಕೇಶವರಾಜನು(ಕೇಶಿಮಯ್ಯ್) ತನ್ನ ಸಚಿವರಲ್ಲಿ ಇಬ್ಬರಾದ ತಿಕ್ಕಣ (ತಿಕ್ಕರಾಜ),ಚಾವಣ (ಚಾಮಯ್ಯ್) ಇವರ ಸಾಹಾಯದಿಂದ ವರ್ಧಮಾನ ಪುರಾಣವನ್ನು ಆರಂಭಿಸಿದ್ದನು. 'ತನ್ನ ಸಹೋದ್ಯೋಗಿ ಕೇಶವರಾಜನು ಆರಂಭಿಸಿ, ನಿಂತು ಹೋಗಿದ್ದ ಕಾವ್ಯವನ್ನು ಆತನ ಮಗನಿಂದಲೇ ಪೂರೆಸಿಸಿದ ರೇಚಣನ ಮುನೋಟ ಮತ್ತು ಔಪ್ಚ್ಯ ಫ್ರಜೆ ಶ್ಲಾಘವಾದದು.[ಆದೇ; ಶಿಕಾರಿಪುರ.೧೨೩]

ಹೊಯ್ಸಳ ವೀರಬಲಾಳನಲ್ಲಿ ಮಹಾಮಂತ್ರಿಯಾಗಿ, ರಾಜ್ಯದ ಆಯವ್ಯಯ ವನ್ನು ನೋಡಿಕೊಳ್ಳುವ ಶ್ರೀಕರಣಾಧಿಕಾರಿಯಾಗಿ ಸೇರಿದ ರೇಚಣನು ಅರಸೀಕೆರೆಯಲ್ಲಿ ಸಹಸ್ರಕೂಟ ಜಿನಾಲಯವನ್ನು ಕಟ್ಟಿಸಿದನು[ಎ.ಕ. ೫.೬೯. ಅರಸೀಕೆರೆ (ಹಾಸನಜಿ/)] .ಆ ಬಸದಿಗೆ ಬಲಾಳ ರಾಯರ ಅನುಮತಿಯ ಮ್ರ್ರೆಗೆ ದಾನಗಳನ್ನು ನೀಡಿದನು. ಈ ಸಹಸ್ರಕೂಟ ಗೃಹ ನಿರ್ಮಾಣ ಹನ್ನೆರಡು ವರ್ಷಗಳ ವರೆಗೆ ನಡೆಯಿತು.ಕೊಲ್ಲಾಪುರ ಮಾಘಣಂದಿ ಸಿದ್ದಾ ಂತಿಯ ಶಿಷ ಶುಭಚಂದ್ರ ತ್ರೈವಿದ್ಯರ ಶಿಷ್ಯರಾದ  ಸಗಣಂದಿ ಸಿದಾಂತಿ ದೇವರು ರೇಚಣ ಗುರುಗಳ. ಅವರು ಸಹಸ್ರಕೂಟ ಜಿನಾಲಯ ನಿರ್ಮಾಣ ಕಾರ್ಯವು ಪೂರೆಸುವವರೆಗೆ ಜೋಳದಕೂಳು ಮತ್ತು ಎಣಯ ಹೊರತಾಗಿ ಭೇರೆ ಆಹಾರವನ್ನು ತೆಗುದುಕೊಳ್ಳಲಿಲ್ಲ.  ಸಾಗರಣಂದಿ ಸಿದ್ದಾಂತಿಯು ಆ ಸ್ಥಯಿಂದ ಮುಂದೆ ನಿಂತು ರೇಚಣದಂಡೇಶನಿಂದ ಸಹಸ್ರಕೂಟ ಜಿನಾಲಯ ವನ್ನು ಮಾಡಿಸಿದರು, ಪರಿಪೂರ್ಣ ವ್ರತರಾದರು. [ಅದೇ:ಸಾಲು ೧-೪] ವಸುದ್ರಕ ಬಾಂಧವ ರೇಚಣನೂ,ಆತನ ಮಡದಿ ಗೌರಾದೇವಿಯು ತಮ್ಮ ನೋಪಿಯ ಉದ್ಯಾಪನೆ ನಿಮಿತ್ತವಾಗಿ ಸಹಸ್ರಕೂಟ ಜಿನಾಲಯ ಪ್ರತಿಷಾಪನೆ ಕಾರ್ಯವನ್ನ ಧಾರಾ ಪೂರ್ವ ಕವಾಗಿ ಮಾಡಿಸಿಕೊಟ್ಟರು.[ಎ.ಕ. ೧೫ .ಅರಸೀಕೆರೆ ೧೯೭.ಅತೇದಿ. ಶಾಸನ .ಪು. ೨೨]

ಕೊಲ್ಲಾಪುರದ ಮಾಘಣಂದಿ ಸಿದ್ದಾಂತಿಯ ಕಾಲ ತಿಳಿದಿದೆ. ಅವರು ಇದ್ದ ಕಾಲದ ನಡುಗಾಲ ಕ್ರಿ.ಶ. ೧೧೦೦[ಎ.ಕ. ೨, ೭೧(೬೪) ೧೧೬೩. 'ಪು.೨೬-೨೮ ]. ಅವರು ತೇರದಾಳದ ಗೊಂಕ - ಜಿನಾಲಯದ  ಪ್ರತಿಷಾಪನೆಗೆ ೧೧೨೫ ರಲ್ಲಿ ಆಗಮಿಸಿದ್ದುರು. [ಇ. ಆ.೧೪.ಪು. ೧೪ ೧೧೨೫ ತೇರದ(ಬಿಜಾಪುರ ಜಿ. /ಜಮಖಂಡಿ ತಾ) :ಎಇ. ೧೯, pp ೩off .೧೧೩೫] ಮಾಘಣಂದಿ ಸಿದ್ದಾಂತಿಯ ಶಿಷ್ಯ ಶುಭಚಂದ್ರ ತ್ರ್ಯೆವಿದರ ಕಾಲವೂ೧೧೨೫ ರಿಂದ ೧೧೫೦ ಎಂದು ಗೊತ್ತಿದೆ. [ಎ. ಕ. ೨. ಆರೇಳು ಶಾಸನಗಳಲ್ಲಿ ಇದರ ಪರಿಚಯವಿದೆ.] ಶುಭಚಂದ್ರ ತ್ರೈವಿದ್ಯರ ಶಿಷ್ಯರಾದ ಈ ಸಾಗರಣದಿಂದ ಸಿದಾಂತಿ ದೇವರ ಕಾಲವನ್ನು ಕ್ರಿ.ಶ. ೧೧೮೦ ಎಂದು ಪರಿಗಣಸಬಹುದು .ಇವರನ್ನು ಇಮ್ಮಡಿ ಸಾಗರಣಂದಿ, ಸಿದ್ದಾಂತಿ ಮುನಿಯೆನ್ನ ಬೇಕಾಗುತ್ತದೆ. ಏಕೆಂದರೆ ಇವರಿಗಿಂತ ನೂರು

ವರ್ಷದ ಹಿಂದೆ ಇನೊಬ್ಬ ಸಾಹರನಂದಿ ಸಿದ್ದಾಂತಿ ಮುನಿಯೂ ಶಾಸನೋಕರಾಗಿದಾರೆ [ಎ.ಕ. ೭. (೧೯೭೯) ನಾಮಂ ೬೪. ೧೧೪೫. ಯಲ್ಲಾದಹಳ್ಳಿ (ಮಂಡ್ಯ ಜಿ. /ನಾಮಂ ತಾ.)] ವಸುಧೃಕಬಾಂಧವ ರೇಚಣನು ಶ್ರ ವಣಬೆಳಗೊಳ ಚಿಕ್ಕಬೆಟ್ಟದ ಪಕ್ಕದಲ್ಲಿರುವ ಜಿನನಾಥ ಪುರದಲ್ಲಿಯೂ ಜಿನಾಗಾರವನ್ನು ಮಾಡಿಸಿದ ವಿಚಾರವನ್ನು ಒಂದು ಶಾಸನ ದಾಖಲಿಸಿದ :ಶ್ರೀ ರೇಚಣಾ ಧಂಣಾಯಕಾ ಮಾಡಿಸಿದಾ ಭಸದಿ [ಎ.ಕ. ೨, ೫೨೮. ೧೨ ಶ. ಕು. ೩೨೫]. ಆ ಬಸದಿಯ ಕೂಲ್ಲಾಪುರದ ಸಾವನನ ಬಸದಿಯ ಫ್ರತಿಬದ್ದವಾಗಿದ್ದಿತು. ಇಲ್ಲಿ ಶಾಂತಿನಾಥ ದೇವರ ಫ್ರತಿಷೆಯನ್ನು ಮಾಡಿ ,ಶ್ರೀಕರಣದ ರೇಚಿಮಯ್ಯ್ ದಣ್ಣ ನಾಯಕನು. ಅದನ್ನು ಸಾಗರಣಂದಿ ಸಿದ್ದಾಂತಿ ದೇವರಿಗೆ ಕೊಟ್ಟನು. [ಎ.ಕ.೨, ೫೨೬(೩೮೦) ೧೩ಶ. ಜಿನನಾಥಪುರ ಪು. ೩೨೫]

ರೇಚಣ ಜೀವಿತದ ಅವಧಿಯನ್ನು ಸ್ಥೂಲವಾಗಿಹೀಗೆ ಸೂಚಿಸಬಹುದು: ಜನನ ಕ್ರಿ.ಶ. ೧೧೩೫: ಬಿಜ್ಜಳನ ಸ್ಯನ್ಯಕ್ಕೆ ಸೇರ್ಪಡೆ ೧೧೫೭: ರಾಯಮುರಾರಿ ಸೋವಿ ದೇವನ ದಂಡಾಧಿಶ ೧೧೬೮ : ಮ್ಯಲುಗಿದೇವ ಮಲ್ಲಿಕಾರ್ಜುನನ ದಂಡಾಧಿಪತಿ ೧೧೭೬; ಸಂಕಮನ ಸೇನಾಪತಿ ೧೧೭೭–೮೦; ಅಹವಮಲ್ಲನ ಮಹಾಫ್ರ ಧಾನಿ– ಚಮೂಪತಿ– ಬಾಹತ್ತರ ನಿಯೋಗಾಧಿಪತಿ ೧೧೮೦–೮೩; ಸಿಂಘಣನಲ್ಲಿ ಇದ್ದುದು ಖಷತವಾಗಿ ತಿಳಿಯದು;ಹೊಯ್ಸಳರ ಬಲಾಳನಲ್ಲ ೧೧೮೮–೧೨೧೮; ದೀರ್ಘಕಾಲ ಬದುಕಿದ ರೇಚಮನು ಸುಮಾರು ೧೧೨೫ರಲ್ಲಿ ನಿಧಾನನಾದಂತೆ ತೋರುತ್ತದೆ. ರೇಚಣನಿಗೆ ಇದ್ದ್ದ ಫ್ರಶಸಿಹಳು; ಅಂಗಜೋಪನು, ಆರ್ಥಿಕ ಕಲತರು. ಜಿನಮತಾಬ್ಜಭಾನು, ಭೀಕರ ವ್ಯರಿ ವಿದಾರಣ ಕೇಸರಿ, ಚಾರಿತ್ರ ರತಾಕರ. ಲೋಕ್ಯಕ ಕಳದ್ರುಮ, ಭೋಗ ಪುರಂದರ, ಮಿಕ್ಕಸುದಾನಿ, ವಸುದ್ಯಕ ಬಾಂಧವ, ಸತ್ಕಳಾಡ್ಯ ಮುಂತಾದ ಬಿರುದು ಬಾವಲಿಗಳಿಂದ ಪುರಸ್ಕ್ರುತನಾಗಿದ್ದನು.

ರೇಚಣನ ಜೀವನದ ಸಾಧನೆಯಿರುನುದು ಹನ್ನೆರಡನೆಯ ಶತಮಾನದ ಉತ್ರಾರ್ಧ ಮತ್ತು ಹದಿಮೂರನೆಯ ಶತಮಾನದ ಆರಂಭದ ಎರಡು ದಶಕಗಳಲ್ಲಿ. ಲಕ್ಕುಂಡಿ ಮತ್ತ

ಅರಸೀಕೆರೆಯಲ್ಲಿ ದೇವಾಲಯಗಳನ್ನು ಕಟ್ಟಿಸಿದ್ದು ,ಆಚಣ್ಣಕವಿಗೆ ಆಸರೆಯಾಗೆ ನಿಂತು ಚಂಪೂಕಾವ್ಯವನ್ನು ಬರೆಸಿದು– ಇವು ರೇಚಣನು ಎಸಗಿದ ಮುಖ್ಯಸಾಂಸ್ಕೃತಿಕ. ಸಾಧನೆಗಳು.ಇವು ಆತನ ಧಾರ್ಮಿಕ ಪ್ರವೃತ್ತಿ ಮತ್ತು ಸಹಿತ್ಯದಲ್ಲಿ ಇದ್ದ ಆಸಕಿಯನ್ನು ಬಿಂಬಿಸುತ್ತವೆ. ಆದರೆ ರೇಚಣನು ಕಳಚುರ್ಯ ಸಾಮ್ರಾಜ್ಯದ ಉಗಮ–ಸಂವರ್ಧನೆಗೂ ಕಾರಣ ಪುರುಷನೆಂಬುದು ಚರಿತ್ರ ಕಾರರಿಗೆ ಮಹತ್ವದ ಸಾಧನೆ. ತನ್ನ ವಂಶ ಪಾರಂಪರ್ಯವಾಗಿ ದಲ್ಲಪನ ಕಾಲದಿಂದಲೂ ಸಂಚಿತವಾಗಿ ಬಂದಿದ್ದ ರಾಜ್ಯ ಶಾಸ ಪ್ರವೀಣತೆ ,ಯುದ್ದ ನೃಪುಣ್ಯಗಳನ್ನು ಧಾರೆಯೆರೆದು ಕಳಚುರ್ಯ ರಾಜ್ಯಲಕ್ಷ್ಮಿಯನ್ನು ಎರಡು ದಶಕಗಳ ವರೆಗೆ ಪೊರೆದು. ಹೀಗಾಗಿ ಕರ್ನಾಟಕದ ರಾಜಕೀಯ,ಸಾಹಿತ್ಯ ಮತ್ತು ಸಾಂಸ್ಕೃತಿಕ ಇತಿಹಾಸದಲ್ಲಿ ರೇಚಣ ಚಮೂಪನು ಘನತರವಾದ ವ್ಯಕಿತ್ವದಿಂದ ಎದ್ದು  ಕಾಣುತ್ತಾನೆ.